ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/29/ಪ್ರಶಿಪಸ/2011–12 /816-2 ದಿನಾಂಕ: 12.01.2012

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಎರಡನೇ ಸಭೆಯು ದಿನಾಂಕ 07.01.2012ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಕಛೇರಿಯಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಆದಿನ ನಡೆದ ಸಭೆಯ ನಡಾವಳಿಯನ್ನು ನಿಮ್ಮ ಅವಗಾಹನೆಗೆ ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರದ ದಿನಾಂಕದಿಂದ 10 ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

Sivana 12/1/12
ಕುಲಸಚಿವರು (ಪ್ರ)

ಇವರಿಗೆ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು–560001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು–560001.
3. ಸರ್ಕಾರದ ಕಾರ್ಯದರ್ಶಿ, ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001.
4. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು.
5. ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
6. ವಿದ್ವಾನ್ ಸಿ. ನಂಜುಂಡಯ್ಯ, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ – 571811
7. ವಿದ್ವಾನ್ ಹರಿದಾಸ ಭಟ್ಟ, ಪ್ರಾಚಾರ್ಯರು, ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು–560028.
8. ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ, ಪ್ರಾಚಾರ್ಯರು, ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ – 572104
9. ವಿದ್ವಾನ್ ಸುರೇಶ್ ಆಚಾರ್ಯ, ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ–576101.
10. ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ, ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ – 581334. ಉ.ಕ. ಜಿಲ್ಲೆ

ದೂರವಾಣಿ: 080 – 26701303 / 26705387; ಇ–ಮೇಲ್: karnatakasanskrituniversity@gmail.com
दूरवाणी: ०८०–२६७०१३०३; २६७०५३८७; ई–सङ्केतः – karnatakasanskrituniversity@gmail.com

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಆವರಣ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-560 018. ದೂರವಾಣಿ: 080-26701303


## ೦೭.೦೧.೨೦೧೨ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೨ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತು ಸಮಿತಿಯ ೨ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜನವರಿ ೦೭, ೨೦೧೨ರ ಶನಿವಾರದಂದು ಬೆಳಿಗ್ಗೆ ೧೧.೦೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | ಉಪ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೩. | ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ, ತುಮಕೂರು | ಸದಸ್ಯರು |
| ೪. | ವಿದ್ವಾನ್ ಸಿ. ನಂಜುಂಡಯ್ಯ, ಆದಿಚುಂಚನಗಿರಿ | ಸದಸ್ಯರು |
| ೫. | ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ, ಹೊನ್ನಾವರ | ಸದಸ್ಯರು |
| ೬. | ವಿದ್ವಾನ್ ಸುರೇಶ್ ಆಚಾರ್ಯ, ಉಡುಪಿ | ಸದಸ್ಯರು |
| ೭. | ಡಾ. ಶ್ರೀನಿವಾಸ ವರಖೇಡಿ, ಕುಲಸಚಿವರು (ಪ್ರ) | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | ಸರ್ಕಾರದ ಕಾರ್ಯದರ್ಶಿ, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಸರ್ಕಾರದ ಉಪ ಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೫. | ವಿದ್ವಾನ್ ಎ. ಹರಿದಾಸ ಭಟ್ಟ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ದಿನಾಂಕ 21.05.2011ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಮೊದಲನೇ ಸಭೆಯ ಅನುಪಾಲನಾ ವರದಿ.**

ಅನುಪಾಲನೆ: ದಿನಾಂಕ: 21.05.2011ರಂದು ನಡೆದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಮೊದಲನೇ ಸಭೆಯಲ್ಲಿ ಚರ್ಚಿತವಾದ ವಿಷಯ ಸಂಖ್ಯೆ 1ರಿಂದ 12ರ ಕುರಿತು ಒಪ್ಪಲಾದ ನಿರ್ಣಯಗಳ ಕುರಿತು ಕ್ರಮಕೈಗೊಳ್ಳಲಾಗಿದೆ.

ವಿಷಯ 9ರಲ್ಲಿ ಸಂಸ್ಕೃತ ಪುಸ್ತಕ ಪುರಸ್ಕಾರ-2010ರ ಯೋಜನೆ ಕುರಿತು ಸಂಸ್ಕೃತ ಭಾಷೆ ಹಾಗೂ ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಹತ್ತು ವಿಭಾಗಗಳಲ್ಲಿ ಪುಸ್ತಕಗಳನ್ನು ಆಹ್ವಾನಿಸಿ ಪುರಸ್ಕಾರಗಳನ್ನು ನೀಡಲು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಉಪಸಮಿತಿಯನ್ನು ರಚಿಸಲಾಗಿದೆ. ಸದಸ್ಯರುಗಳ ವಿವರ ಈ ಕೆಳಕಂಡಂತಿದೆ:

| | |
|---|---|
| 1. ಕುಲಪತಿಗಳು | ಅಧ್ಯಕ್ಷರು |
| 2. ಡಾ. ಎಚ್.ಆರ್. ವಿಶ್ವಾಸ್ | ಸದಸ್ಯರು |
| 3. ವಿದ್ವಾನ್ ಎ. ಹರಿದಾಸ ಭಟ್ಟ | ಸದಸ್ಯರು |
| 4. ಡಾ. ಜನಾರ್ದನ ಹೆಗಡೆ | ಸದಸ್ಯರು |
| 5. ನಿರ್ದೇಶಕರು, ಸಂ.ಶಿ.ನಿ. | ಸದಸ್ಯ ಸಂಚಾಲಕರು |

ಈ ಸಮಿತಿಯು ಸಭೆ ಸೇರಿ ಪುರಸ್ಕಾರಕ್ಕೆ ಅರ್ಹವಾದ ಪುಸ್ತಕಗಳನ್ನು ಆಯ್ಕೆ ಮಾಡುವ ಅಧಿಕಾರ ಹೊಂದಿರುತ್ತದೆ.

**ವಿಷಯ 2: ಸಂಶೋಧನಾ ವ್ಯಾಸಂಗಕ್ಕೆ ಅನುಮತಿ ನೀಡಿರುವ ಬಗ್ಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕೆಲ ಅಧ್ಯಾಪಕರು ಉನ್ನತ ವ್ಯಾಸಂಗವನ್ನು ಕೈಗೊಳ್ಳಲು ಅನುಮತಿ ನೀಡುವಂತೆ ಕೋರಿ ಪತ್ರ ಬರೆದಿದ್ದು, ಉನ್ನತ ವ್ಯಾಸಂಗವನ್ನು ಪಡೆದುಕೊಳ್ಳುವುದರಿಂದ ಬೋಧನಾ ಕೌಶಲ್ಯ ಉತ್ತಮವಾಗುವ ಹಿನ್ನೆಲೆಯಲ್ಲಿ ಅನುಮತಿಯನ್ನು ನೀಡಲಾಗಿದೆ. ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಿರುವ ಅಧ್ಯಾಪಕರ ವಿವರ ಕೆಳಗಿನಂತಿವೆ:

1. ವಿದ್ವಾನ್ ಎಸ್. ರೇಣುಕಾರಾಧ್ಯ, ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ವೇದ-ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು (ಕಡತ ಸಂಖ್ಯೆ: ಕಸಂವಿ/ವಿಶೇಷರಜೆ/1/2011-12, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ಕರ್ನಾಟಕ ನಾಗರಿಕ ಸೇವಾ ನಿಯಮ 117(4)ರಂತೆ ಅನುಮತಿಯನ್ನು ನೀಡಲಾಗಿದೆ.)

2. **ವಿದ್ವಾನ್ ಪತಂಜಲಿ ವೀಣಾಕರ,** ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ, ಸುರಕಟ್ಟೆ ಅಂಚೆ, ಹೊನ್ನಾವರ ತಾಲ್ಲೂಕು, ಉ.ಕ. (ಪತ್ರ ಸಂಖ್ಯೆ: ಕಸಂವಿ/ವಿಶೇಷರಜೆ/1/2011-12/524, ದಿನಾಂಕ: 05.09.2011ರ ಪತ್ರದಂತೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಯುಜಿಸಿ ನಿಯಮಾವಳಿಗಳಂತೆ ಅಧ್ಯಯನ ಕಾರ್ಯಕ್ಕಾಗಿ ಅನುಮತಿಯನ್ನು ನೀಡಲಾಗಿದೆ.)
3. **ವಿದ್ವಾನ್ ಎನ್. ಸುಬ್ರಹ್ಮಣ್ಯ ಭಟ್ಟ,** ಸಹಾಯಕ ಪ್ರಾಧ್ಯಾಪಕರು, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು. (ಪತ್ರಸಂಖ್ಯೆ: ಕಸಂವಿ/ವಿಶೇಷರಜೆ/1/2011-12, ದಿನಾಂಕ: 25.11.2011ರ ಪತ್ರದಂತೆ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ ಇಲ್ಲಿ ಪಿಎಚ್.ಡಿ. ಅಧ್ಯಯನ ಕಾರ್ಯಕ್ಕಾಗಿ ಅನುಮತಿಯನ್ನು ನೀಡಲಾಗಿದೆ.)
4. **ವಿದ್ವಾನ್ ಎನ್. ಮುರಳೀಧರ,** ಸಹಾಯಕ ಪ್ರಾಧ್ಯಾಪಕರು, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು. (ಪತ್ರಸಂಖ್ಯೆ: ಕಸಂವಿ/ವಿಶೇಷರಜೆ/1/2011-12, ದಿನಾಂಕ: 25.11.2011ರ ಪತ್ರದಂತೆ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ ಇಲ್ಲಿ ಪಿಎಚ್.ಡಿ. ಅಧ್ಯಯನ ಕಾರ್ಯಕ್ಕಾಗಿ ಅನುಮತಿಯನ್ನು ನೀಡಲಾಗಿದೆ.)
5. **ವಿದ್ವಾನ್ ಡಿ. ಬಂಗಾರಗಿರಿ,** ಸಹಾಯಕ ಪ್ರಾಧ್ಯಾಪಕರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು.
6. **ವಿದ್ವಾನ್ ಜಿ.ಪಿ. ನಾಗರಾಜ,** ಪ್ರಾಧ್ಯಾಪಕರು, ದ್ವೈತವೇದಾಂತ, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು.
7. **ವಿದ್ವಾನ್ ಸುಬ್ರಹ್ಮಣ್ಯ ಭಟ್ಟ,** ಸಹಾಯಕ ಪ್ರಾಧ್ಯಾಪಕರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು.
8. **ವಿದ್ವಾನ್ ಅನಂತಕೃಷ್ಣ ಭಟ್ಟ,** ಸಹ ಪ್ರಾಧ್ಯಾಪಕರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು.

**ವಿಷಯ 3: 2010-11ನೇ ಸಾಲಿನ ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಪರೀಕ್ಷೆಗಳ ಘಟಿಕೋತ್ಸವ ನಡೆಸುವ ಬಗೆಗೆ.**

ಟಿಪ್ಪಣಿ: ಸಾರ್ವಜನಿಕ ಶಿಕ್ಷಣ ಇಲಾಖೆಯವರು ನಡೆಸುತ್ತಿದ್ದ ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010-11ನೇ ಸಾಲಿನಲ್ಲಿ ನಡೆಸಿ, ಫಲಿತಾಂಶಗಳನ್ನು ಘೋಷಿಸಲಾಗಿದೆ. ಪಾಠಶಾಲೆಗಳಿಗೆ ಸಂಬಂಧಿಸಿದಂತೆ ಈಗಾಗಲೇ **'ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ'** ಸಮಾರಂಭವನ್ನು ನಡೆಸಲಾಗಿದೆ. ಅದರಂತೆಯೇ ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ತರಗತಿಗಳಿಗೆ ಸಂಬಂಧಿಸಿದಂತೆ ಘಟಿಕೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಬೇಕಾಗಿದೆ. ವಿಶ್ವವಿದ್ಯಾಲಯವು ವಿದ್ಯುಕ್ತವಾಗಿ ಉದ್ಘಾಟನೆಯಾಗದ ಹಿನ್ನೆಲೆಯಲ್ಲಿ ಘಟಿಕೋತ್ಸವ ನಡೆಸುವ ಬಗೆಗೆ ಸಭೆಯ ಚರ್ಚೆ ಬಯಸಿದೆ.

ನಿರ್ಣಯ: **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಇನ್ನೂ ವಿಧ್ಯುಕ್ತವಾಗಿ ಉದ್ಘಾಟನೆ ಆಗಿಲ್ಲವಾದುದರಿಂದ, ಮೊದಲು ವಿಶ್ವವಿದ್ಯಾಲಯದ ಉದ್ಘಾಟನೆ ಆಗಬೇಕು. ಅನಂತರ ೨೦೧೦-೧೧ ಮತ್ತು ೨೦೧೧-೧೨ನೇ ಸಾಲಿನ ಘಟಿಕೋತ್ಸವವನ್ನು ಒಟ್ಟಿಗೆ ಮಾಡುವುದು ಉಚಿತವೆಂದು ಸಭೆ ನಿರ್ಣಯಿಸಿತು.**

**ವಿಷಯ 4: ವಿದ್ವನ್ಮಧ್ಯಮಾ ದ್ವಿತೀಯ ವರ್ಷದ ಪರೀಕ್ಷೆಗಳಿಗೆ ಆಯಾ ಕಾಲೇಜುಗಳೇ ಪ್ರಶ್ನೆಪತ್ರಿಕೆ ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವ ಬಗೆಗೆ.**

ಟಿಪ್ಪಣಿ: ಕೆಲವು ಕಾಲೇಜಿನ ಪ್ರಾಚಾರ್ಯರು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು, ವಿದ್ವನ್ಮಧ್ಯಮಾ ದ್ವಿತೀಯ ವರ್ಷದ ತರಗತಿಗಳಿಗೆ ಹಳೇ ಪಠ್ಯಕ್ರಮವನ್ನು 2011-12ನೇ ಸಾಲಿಗೆ ಮುಂದುವರಿಸಿರುವುದರಿಂದ, ಈ ಸಾಲಿನಲ್ಲಿ ದ್ವಿತೀಯ ವರ್ಷಕ್ಕೆ ಪ್ರಸಿದ್ಧ ಪರೀಕ್ಷೆಗಳನ್ನು ನಡೆಸುವ ಬದಲು ತರಗತಿ ಪರೀಕ್ಷೆಗಳನ್ನು ನಡೆಸುವುದು ಸೂಕ್ತವೆಂದೂ ಈ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆ ಮತ್ತು ಮೌಲ್ಯಮಾಪನ ಕಾರ್ಯವನ್ನು ಕಾಲೇಜಿನಲ್ಲೇ ಕೈಗೊಳ್ಳುವುದು ಸೂಕ್ತವೆಂದೂ ತಿಳಿಸಿರುತ್ತಾರೆ.

ನಿರ್ಣಯ: **ಈ ವಿಷಯವಾಗಿ ಸಭೆಯು ಸುದೀರ್ಘವಾಗಿ ಚರ್ಚಿಸಿತು. ಆಯಾಯ ಕಾಲೇಜಿನವರು ಪರೀಕ್ಷೆಗಳನ್ನು ನಡೆಸುವುದು. ಅನಂತರ ಫಲಿತಾಂಶ ಮತ್ತು ಅಂಕಪಟ್ಟಿ ವಿತರಣೆಯ ಬಗೆಗೂ ಪ್ರಮಾಣಪತ್ರ ನೀಡುವ ಬಗೆಗೂ ಯೋಚಿಸಬಹುದೆಂದು ಹೇಳಿದ್ದಲ್ಲದೆ, ಮಾನ್ಯ ಕುಲಪತಿಗಳು ಸರ್ವದೃಷ್ಟಿಯಿಂದ ಪರಿಶೀಲಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಬಹುದೆಂದು ಸಭೆಯು ಅಭಿಪ್ರಾಯವನ್ನು ವ್ಯಕ್ತಪಡಿಸಿತು.**

**ವಿಷಯ 5: ವೇದ ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಪರೀಕ್ಷೆಗಳನ್ನು ಹಳೆಯ ಪಠ್ಯಕ್ರಮಕ್ಕನುಗುಣವಾಗಿ ನಡೆಸುವ ಬಗೆಗೆ.**

ಟಿಪ್ಪಣಿ: ವೇದ ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ತರಗತಿಗಳಿಗೆ ಈ ಹಿಂದೆ ಅಳವಡಿಸಿಕೊಳ್ಳಲಾಗಿದ್ದ ಪಠ್ಯಕ್ರಮವನ್ನೇ 2011-12ನೇ ಸಾಲಿಗೂ ಮುಂದುವರೆಸಲಾಗಿದೆ. ಈ ಹಿನ್ನೆಲೆಯಲ್ಲಿ ಹಳೆಯ ಪಠ್ಯಕ್ರಮಕ್ಕನುಗುಣವಾಗಿಯೇ 2011-12ನೇ ಸಾಲಿನ ಪ್ರಸಿದ್ಧ ಪರೀಕ್ಷೆಗಳನ್ನು ನಡೆಸಬೇಕಾಗಿದೆ.

ನಿರ್ಣಯ: **ಮೇಲಿನ ವಿಷಯಗಳನ್ನು ಚರ್ಚಿಸಿ ವೇದ ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಪರೀಕ್ಷೆಗಳನ್ನು ಹಳೆಯ ಪಠ್ಯಕ್ರಮಕ್ಕೆ ಅನುಗುಣವಾಗಿ ನಡೆಸಬಹುದೆಂದು ಸಭೆಯು ನಿರ್ಣಯಿಸಿತು.**

**ವಿಷಯ 6: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪದವಿಯನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಅಧ್ಯಾಯ 5ರ ಶಾಸನಗಳು ಶೀರ್ಷಿಕೆಯ ಪರಿಚ್ಛೇದ 38(5)ರ ಅವಕಾಶಗಳನ್ವಯ ಸಂಸ್ಕೃತ ಭಾಷೆ, ಸಾಹಿತ್ಯ, ಹಾಗೂ ನಾನಾ ಶಾಸ್ತ್ರಗಳಲ್ಲಿ, ವೇದ-ವೇದಾಂತ-ವೇದಾಂಗಶಾಸ್ತ್ರಗಳಲ್ಲಿ ಮತ್ತಿತರ ಸಂಬಂಧಿತ ವಿಷಯಗಳಲ್ಲಿ ವಿಶ್ವವಿದ್ಯಾಲಯವು

ಸಂಶೋಧನೆ ಹಾಗೂ ಮಾರ್ಗದರ್ಶನವನ್ನು ಮಾಡಬೇಕಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪಿಎಚ್.ಡಿ.ಗೆ ಸಂಬಂಧಿಸಿದಂತೆ ದಿನಾಂಕ: 14, 15 ಮತ್ತು 16, ಡಿಸೆಂಬರ್ 2010ರಂದು ನಡೆದ ಎಂ.ಫಿಲ್., ಪಿಎಚ್.ಡಿ. ಮತ್ತು ಡಿ.ಲಿಟ್. ಪದವಿಗಳ ನಿಯಮಾವಳಿ ಸಮಿತಿ ಸಭೆಯಲ್ಲಿ ಪಿಎಚ್.ಡಿ. ನಿಯಮಾವಳಿಗಳನ್ನು ತಾತ್ಪೂರ್ತಿಕವಾಗಿ ರೂಪಿಸಿತ್ತು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ದಿನಾಂಕ: 16.11.2011ರ ಐದನೆಯ ಸಾಮಾನ್ಯ ಸಭೆಯಲ್ಲಿ ಉನ್ನತ ಶಿಕ್ಷಣಕ್ಕೆ ಒತ್ತು ಕೊಡುವಂತೆ ಚರ್ಚಿಸಿದ ಮೇರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಯನ್ನು ಪ್ರಾರಂಭಿಸುವ ಬಗೆಗೆ ನಿಯಮಗಳನ್ನು ರಚಿಸಿ ಅನುಮೋದನೆಯನ್ನು ಪಡೆಯಬೇಕಾಗಿದೆ.

ನಿರ್ಣಯ: **ಈ ಸಂಬಂಧವಾಗಿ ತನ್ನ ಒಪ್ಪಿಗೆಯನ್ನು ನೀಡಿದ್ದಲ್ಲದೆ, ಪ್ರಶಾಸನ ಸಮಿತಿಯ ಮುಂದೆ ಮಂಡಿಸಿ ಸೂಕ್ತ ಉಪಸಮಿತಿಯ ಮೂಲಕ ಈಗ ಸಿದ್ಧಗೊಂಡಿರುವ ತಾತ್ಪೂರ್ತಿಕ ನಿಯಮಗಳನ್ನು ಪರಿಶೀಲಿಸಿ ಕ್ರಮವಹಿಸಬಹುದೆಂದು ತೀರ್ಮಾನಿಸಿತು.**

**ವಿಷಯ 7: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿ ಬರುವ ಸಂಸ್ಕೃತ ಪಾಠಶಾಲೆಗಳಲ್ಲಿನ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ವಿದ್ಯಾರ್ಹತೆ ನಿಗದಿಪಡಿಸುವ ಕುರಿತು.**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿ ಬರುವ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ನಿಗದಿಪಡಿಸಬಹುದಾಗಿದೆ.

1. ವಿದ್ಯಾರ್ಹತೆ

ಅ. **ಪ್ರಥಮಾ:** ಎಸ್.ಎಸ್.ಎಲ್.ಸಿ. ಮತ್ತು ಸಂಸ್ಕೃತ ಸಾಹಿತ್ಯ **ಅಥವಾ** ಕನ್ನಡ ಪಂಡಿತ್

ಆ. **ಪ್ರಥಮಾ ಮತ್ತು ಕಾವ್ಯ:** ಎಸ್.ಎಸ್.ಎಲ್.ಸಿ. ಮತ್ತು ಸಂಸ್ಕೃತ ವಿದ್ವನ್ಮಧ್ಯಮಾ **ಅಥವಾ** ತತ್ಸಮಾನ.

ಇ. **ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ:** ಎಸ್.ಎಸ್.ಎಲ್.ಸಿ. ಮತ್ತು ಸಂಸ್ಕೃತ ವಿದ್ವದುತ್ತಮಾ **ಅಥವಾ** ತತ್ಸಮಾನ.

* ತತ್ಸಮಾನ ಎಂದರೆ ಭಾರತದ ಕಾನೂನಿನನ್ವಯ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದಿಂದ ಪಡೆದ ಸಂಸ್ಕೃತ ಐಚ್ಛಿಕ ಬಿ.ಎ. ಪದವಿ/ಶಾಸ್ತ್ರಿ ಪದವಿ ವಿದ್ವನ್ಮಧ್ಯಮಾ ಪದವಿಗೆ ಸಮಾನವಾಗಿರುತ್ತದೆ. ಸಂಸ್ಕೃತ ಎಂ.ಎ. ಅಥವಾ ಆಚಾರ್ಯ ಪದವಿ ವಿದ್ವದುತ್ತಮಾ ಪದವಿಗೆ ಸಮಾನವಾಗಿರುತ್ತದೆ. ಈ ಹುದ್ದೆಗಳಿಗೆ ಸಂಬಂಧಿಸಿದಂತೆ ವಯೋಮಿತಿ, ವೇತನಶ್ರೇಣಿ ಹಾಗೂ ನೇಮಕಾತಿ ನಿಯಮಗಳು ಸರ್ಕಾರದ ನಿಯಮಾವಳಿಗಳಂತೆ ಅನ್ವಯವಾಗುತ್ತವೆ.

ನಿರ್ಣಯ: **ಮೇಲ್ಕಂಡ ವಿಷಯಗಳನ್ನು ಪರಿಶೀಲಿಸಿದ ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:

**ವಿಷಯ 1: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡುವ ಕುರಿತು.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶಾಸನ 2010ರ ಪರಿಚ್ಛೇದ 47ರಲ್ಲಿ ದತ್ತವಾದ ಅವಕಾಶಗಳನ್ವಯ ರಾಜ್ಯದಲ್ಲಿ ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ಶಾಸ್ತ್ರಗಳ, ವೇದ ವೇದಾಂತ ವಿಷಯಗಳ ಕುರಿತು ಸಂಶೋಧನೆ, ಗ್ರಂಥಸಂಪಾದನೆ, ವಿಚಾರ ಸಂಕಿರಣಗಳು, ಪ್ರಕಟಣೆಗಳು, ಇತ್ಯಾದಿ ಚಟುವಟಿಕೆಗಳನ್ನು ನಡೆಸುತ್ತಿರುವ ಸಂಶೋಧನ ಕೇಂದ್ರಗಳಿಗೆ ಮಾನ್ಯತೆ ನೀಡಬಹುದಾಗಿರುತ್ತದೆ.

ನಿರ್ಣಯ: **ಸಂಸ್ಕೃತ ಸಂಶೋಧನ ಕೇಂದ್ರಗಳು ಕಳುಹಿಸಿರುವ ಪ್ರಸ್ತಾವನೆಗಳನ್ನು ಸಭೆಯು ಪರಿಶೀಲಿಸಿತು. ಈ ಅಂಶವನ್ನು ಪ್ರಶಾಸನ ಸಮಿತಿಯ ಮುಂದೆ ಮಂಡಿಸಬಹುದೆಂದೂ ಸೂಕ್ತ ರೀತಿಯಲ್ಲಿ ಮಾನ್ಯತಾ ಪರಿಶೀಲನ ಉಪಸಮಿತಿಯನ್ನು ರಚಿಸಬಹುದೆಂದೂ ಸಭೆ ನಿರ್ಣಯಿಸಿತು.**

**ವಿಷಯ 2: ಹೊಸದಾಗಿ ನೇಮಕವಾದ ಪಾಠಶಾಲಾ ಶಿಕ್ಷಕರಿಗೆ ಸೇತುಬಂಧ ತರಬೇತಿ ನೀಡುವ ಕುರಿತು.**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ನೇಮಕವಾದ ಪಾಠಶಾಲಾ ಶಿಕ್ಷಕರಿಗೆ ಪ್ರಾಥಮಿಕ ಹಂತದಲ್ಲಿ ಸಂಸ್ಕೃತ ಶಿಕ್ಷಣವನ್ನು ನೀಡುವಲ್ಲಿ ಸೇತುಬಂಧ ತರಬೇತಿಯನ್ನು ನೀಡಿ ಸಂಸ್ಕೃತ ಬೋಧನಾಕ್ರಮದ ಗುಣಮಟ್ಟವನ್ನು ಹೆಚ್ಚಿಸಬೇಕಾಗಿದೆ. ಈ ನಿಟ್ಟಿನಲ್ಲಿ ಎಲ್ಲ ಶಿಕ್ಷಕರಿಗೆ ಸಂಭಾಷಣ ತರಬೇತಿಯನ್ನು ನೀಡಬೇಕಾಗಿದೆ. ಈ ನಿಟ್ಟಿನಲ್ಲಿ 2011–12ನೇ ಸಾಲಿನಲ್ಲಿ ಲಭ್ಯವಿರುವ ಅಭಿವೃದ್ಧಿ ಅನುದಾನದಲ್ಲಿಯೇ ಮೊತ್ತವನ್ನು ಬಳಸಿ ಕಾರ್ಯಕ್ರಮ ನಡೆಸಲು ಸಭೆಯ ಮುಂದೆ ಚರ್ಚೆಗೆ ಇರಿಸಲಾಗಿದೆ.

ನಿರ್ಣಯ: **ಹೊಸದಾಗಿ ನೇಮಕಗೊಂಡಿರುವ ಪಾಠಶಾಲಾ ಶಿಕ್ಷಕರಿಗೆ ಸೇತುಬಂಧ ತರಬೇತಿಯನ್ನು ನೀಡಬೇಕೆಂದು ಸೂಚಿಸಿತು. ಬೇರೆ ಬೇರೆ ಸ್ಥಳಗಳಲ್ಲಿ ೧೦ ದಿನಗಳಂತೆ ಒಟ್ಟು ಮೂರು ತರಬೇತಿ ಶಿಬಿರ ನಡೆಸಬಹುದೆಂದು ನಿರ್ಣಯಿಸಿತು.**

**ವಿಷಯ 3: ಸಂಸ್ಕೃತ ಪಾಠಶಾಲಾ ಶಿಕ್ಷಕರು ಸಹಪಠ್ಯ ಚಟುವಟಿಕೆಯಲ್ಲಿ ಸಂಸ್ಕೃತವನ್ನು ಅಳವಡಿಸಿಕೊಳ್ಳುವ ಕುರಿತು.**

ಟಿಪ್ಪಣಿ: ಸಂಸ್ಕೃತ ಭಾಷೆಯನ್ನು ಆಡುಭಾಷೆಯನ್ನಾಗಿಸಿ ಸಾರ್ವಜನಿಕರ ಕೈಗೆಟುಕುವಂತೆ ಮಾಡುವ ನಿಟ್ಟಿನಲ್ಲಿ ಸಂಸ್ಕೃತ ಶಿಕ್ಷಕರು ಕಡ್ಡಾಯವಾಗಿ ಸಂಸ್ಕೃತ ಭಾಷೆಯಲ್ಲಿ ಸಂಭಾಷಣೆಯನ್ನು ಮಾಡಬೇಕಾಗಿದ್ದು, ಈ ಕುರಿತು ಎಲ್ಲ ಸಂಸ್ಕೃತ ಶಿಕ್ಷಕರೂ ಸಂಸ್ಕೃತ

ಸಂಭಾಷಣ ಶಿಬಿರ ನಡೆಸುವ ತರಬೇತಿಯನ್ನು ಪಡೆಯಲು ಮತ್ತು ಭಾಷೆ, ವ್ಯಾಕರಣ ಮತ್ತು ಸಾಹಿತ್ಯ ಬೋಧನೆಯ ವಿಭಿನ್ನ ಕೌಶಲಗಳನ್ನು ಪಡೆಯಲು, ಇವರೆಲ್ಲರ ತರಬೇತಿಗಾಗಿ ಸೂಕ್ತ ಮಾಧ್ಯಮವಾಗಿ ಈ ವಿಷಯಗಳಲ್ಲಿ ಪ್ರಭುತ್ವವನ್ನು ಪಡೆದ ಸಂಸ್ಥೆಯೊಂದನ್ನು ನಿಯೋಜಿಸಬಹುದಾಗಿದೆ.

ನಿರ್ಣಯ: ಆಯಾಯ ತಾಲ್ಲೂಕುಗಳಲ್ಲಿರುವ ಸಂಸ್ಕೃತ ಶಿಕ್ಷಕರಿಗೆ ಕ್ರಮಕ್ರಮವಾಗಿ ಸಂಸ್ಕೃತ ಸಂಭಾಷಣಾ ಶಿಬಿರ ನಡೆಸಬಹುದೆಂದೂ ಈ ವಿಷಯವಾಗಿ 'ಸಂಸ್ಕೃತ ಭಾರತಿ'ಯ ನೆರವನ್ನು ಪಡೆಯಬಹುದೆಂದೂ ಸಭೆ ಸೂಚಿಸಿ ನಿರ್ಣಯಿಸಿತು.

**ವಿಷಯ 4: ಶಕ್ತಿವಿಶಿಷ್ಟಾದ್ವೈತ ವೇದಾಂತ ವಿಭಾಗದಲ್ಲಿ ಉನ್ನತ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ 'ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ಸ್ವರ್ಣಪದಕ'ವನ್ನು ನೀಡುವ ಬಗೆಗೆ.**

ಟಿಪ್ಪಣಿ: ಗದಗ ಜಿಲ್ಲೆ, ಮುಂಡರಗಿ ತಾ. ಮುಂಡರಗಿಯ ಶ್ರೀಮನ್ನಿರಂಜನ ಪ್ರಣವಸ್ವರೂಪ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಶಿವಯೋಗಿ ಮಹಾಸ್ವಾಮಿಗಳು ತಮ್ಮ ಶ್ರೀಮಠದ ವತಿಯಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 'ಶಕ್ತಿವಿಶಿಷ್ಟಾದ್ವೈತ ವೇದಾಂತ' ವಿಭಾಗದಲ್ಲಿ ಪ್ರತಿವರ್ಷ ಉನ್ನತ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ 'ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ಸ್ವರ್ಣಪದಕ' ಹೆಸರಿನಲ್ಲಿ ಸ್ವರ್ಣಪದಕವನ್ನು ನೀಡಲು ಇಚ್ಛಿಸಿ, ಇದಕ್ಕಾಗಿ ದತ್ತಿನಿಧಿಯನ್ನು ಸ್ಥಾಪಿಸಲು ವಿಶ್ವವಿದ್ಯಾಲಯಕ್ಕೆ ರೂ. 25,000/–ಗಳನ್ನು ನೀಡಿರುತ್ತಾರೆ. ಇದನ್ನು ಅತಿಹೆಚ್ಚು ಬಡ್ಡಿಯನ್ನು ನೀಡುವ ಬ್ಯಾಂಕಿನಲ್ಲಿ ಠೇವಣಿಸಿ ಬರುವ ಬಡ್ಡಿಯ ಮೊತ್ತದಲ್ಲಿ, ಅದಕ್ಕೆ ತಕ್ಕನಾದ ಸ್ವರ್ಣಪದಕವನ್ನು ನೀಡಬಹುದಾಗಿದೆ.

ನಿರ್ಣಯ: ಈ ಅಂಶಕ್ಕೆ ಸಭೆಯು ತನ್ನ ಸಂತೋಷವನ್ನು ವ್ಯಕ್ತಪಡಿಸಿ ಅನುಮೋದಿಸಿತು. ಬೆಳ್ಳಿಪದಕಕ್ಕೆ ಬಡ್ಡಿಯಿಂದ ಬರುವ ಹಣಕ್ಕೆ ಚಿನ್ನದ ಬಿಲ್ಲೆ ಪಡೆದು ಡೈ ಮಾಡಿ ನೀಡಬಹುದೆಂದು ಕುಲಪತಿಯವರು ಸೂಚಿಸಿದರು. ಇದಕ್ಕೆ ಸಭೆಯು ಒಪ್ಪಿಗೆಯನ್ನು ನೀಡಿತು.

**ವಿಷಯ 5: 'ಪಂಡಿತರತ್ನಂ ಶಿರಸಿ ಗುರುಶಾಂತ ಶಾಸ್ತ್ರೀ ದತ್ತಿನಿಧಿ' ಸ್ಥಾಪಿಸುವ ಬಗೆಗೆ.**

ಟಿಪ್ಪಣಿ: ಮೈಸೂರಿನ ಶ್ರೀ ನಂದಿಕೇಶ್ವರ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಎಸ್. ಜ್ಞಾನಶಂಕರ್ ಅವರು ತಮ್ಮ ಪಿತಾಮಹರಾದ ಆಸ್ಥಾನ ಮಹಾವಿದ್ವಾನ್ 'ಪಂಡಿತ ರತ್ನಂ' ಶಿರಸಿ ಗುರುಶಾಂತ ಶಾಸ್ತ್ರಿಗಳ ಸ್ಮರಣಾರ್ಥವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 'ಶಕ್ತಿವಿಶಿಷ್ಟಾದ್ವೈತ ವೇದಾಂತ' ಶಾಸ್ತ್ರವಿಭಾಗಕ್ಕೆ ದತ್ತಿ ನಿಧಿ ಸ್ಥಾಪಿಸಲು ಇಚ್ಛಿಸಿ, ಅದರಂತೆ ಈ ವಿಭಾಗದಲ್ಲಿ ಸ್ವರ್ಣಪದಕವನ್ನು ನೀಡಲು ಇಚ್ಛಿಸಿದ್ದಾರೆ. ಇದಕ್ಕೆ ಸಂಬಂಧಿಸಿ ವಿಶ್ವವಿದ್ಯಾಲಯದಿಂದ ಪತ್ರವ್ಯವಹಾರ ಮಾಡಲಾಗಿದ್ದು, ತಗಲುವ ವೆಚ್ಚವನ್ನು ದತ್ತಿನಿಧಿಯಾಗಿ ಠೇವಣಿಸಲು ಒಪ್ಪಿರುತ್ತಾರೆ. (ಅಂದಾಜು ರೂ. 1 ಲಕ್ಷ)

ನಿರ್ಣಯ: ಈ ಅಂಶಕ್ಕೆ ಸಭೆಯು ತನ್ನ ಸಮ್ಮತಿಯನ್ನು ಸೂಚಿಸಿತಲ್ಲದೇ, ವಿದ್ವದುತ್ತಮಾ ಎಂ.ಎ., ವಿಷಯಕ್ಕೆ ಸಂಬಂಧಿಸಿದಂತೆ ಒಂದೊಂದು ವಿಷಯಕ್ಕೂ 'ಚಿನ್ನದ ಪದಕ' ನೀಡಲು ದಾನಿಗಳನ್ನು ಹುಡುಕುವುದು ಉಚಿತವೆಂದೂ ದತ್ತಿನಿಧಿ ಸ್ಥಾಪಿಸುವ ಸಂಬಂಧದ ಬಗೆಗೆ ಸಭೆಯು ಸಂತೋಷದಿಂದ ತನ್ನ ಒಪ್ಪಿಗೆಯನ್ನು ನೀಡಿತು.

**ವಿಷಯ 6: 2011–12ನೇ ಸಾಲಿನ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗಳ ಸಂಬಂಧದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು.**

ಟಿಪ್ಪಣಿ: ಈ ವಿಷಯದಲ್ಲಿ ವಿಶ್ವವಿದ್ಯಾಲಯದಲ್ಲಿ ಪರೀಕ್ಷೆಗಳನ್ನು ನಡೆಸುವಾಗ ಕೇಂದ್ರಗಳಿಗೆ ಪರಿಶೀಲನಾ ತಂಡದ ಅನಿರೀಕ್ಷಿತ ಭೇಟಿ, ಮೌಲ್ಯಮಾಪನ, ಫಲಿತಾಂಶ ನೀಡುವುದು, ಅಂಕಪತ್ರ ನೀಡುವುದು –ಈ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವ ಬಗೆಗೆ ಚರ್ಚಿಸಬೇಕಾಗಿದೆ.

ನಿರ್ಣಯ: ಈ ಸಂಬಂಧದಲ್ಲಿ ಸೂಕ್ತ ನಿರ್ಣಯಗಳನ್ನು ಕಾಲಕಾಲಕ್ಕೆ ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ಕುಲಸಚಿವರೇ ತೆಗೆದುಕೊಂಡು ಈ ಪರೀಕ್ಷೆಗಳನ್ನು ನಡೆಸಬಹುದಾಗಿದೆ.

Srinivasa 12/1/12

ಡಾ. ಶ್ರೀನಿವಾಸ ವರಖೇಡಿ
ಸದಸ್ಯ ಕಾರ್ಯದರ್ಶಿ

ಮಲ್ಲೇಪುರಂ ವೆಂಕಟೇಶ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು